ದಿಃ14.01.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಕಾಂಗ್ರೆಸ್ ಪಕ್ಷದ ಅನುಯಾಯಿ ಆಗಿದ್ದು ಈಗ ಬಿಜೆಪಿ ಪಕ್ಷದಲ್ಲಿ ಸದಸ್ಯನಿರುತ್ತೇನೆ. ರೋಹಿತ್ ನಮ್ಮ ಪಕ್ಕದ ಊರಾದ ಸಂತೆಮೊಗೇನಹಳ್ಳಿದೊಡ್ಡಿಯವರು. ಈ ಪ್ರಕರಣದ ದೂರುದಾರರಾದ ರವಿಕುಮಾರ್‌ರವರ ಜಮೀನು ನಮ್ಮ ಜಮೀನಿನ ಬಾಜುವಿನಲ್ಲಿ ಸುಮಾರು 40 ಮೀಟರ್ ದೂರದಲ್ಲಿ ಇರುತ್ತದೆ. ನಮ್ಮ ಜಮೀನಿನ ಸರ್ವೆ ನಂಬರ್.9/7 ಇರುತ್ತದೆ. ರವಿಕುಮಾರ್ ಮತ್ತು ರೋಹಿತ್‌ರವರ ಜಮೀನಿನ ಸರ್ವೆ ನಂಬರ್‌ಗಳು ನನಗೆ ಗೊತ್ತಿಲ್ಲ.

2. 2ನೇ ಆರೋಪಿ ನೋಡಿಕೊಳ್ಳುವ ವಾಸುರವರ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ವಾಸುರವರ ಜಮೀನು ಚಾಸಾ.1 ರವರ ಜಮೀನಿನ ಪಶ್ಚಿಮ ಮತ್ತು ದಕ್ಷಿಣ ದಿಕ್ಕಿಗೆ ಬರುತ್ತದೆ. ರವಿಕುಮಾರ್‌ರವರ ಜಮೀನಿನ ಉತ್ತರಕ್ಕೆ ಸಂತೆಮೊಗೇನಹಳ್ಳಿ ಇಗ್ಗಲೂರು ಕಡೆಗೆ ಹೋಗುವ ರಸ್ತೆ ಇದೆ ಎನುನವುದು ಸರಿ. ಇಗ್ಗಲೂರಿಂದ ಚನ್ನಪಟ್ಟಣದವರೆಗೆ ಸುಮಾರು ಗ್ರಾಮಗಳು ಇವೆ ಎನ್ನುವುದು ಸರಿ. ಆ ಹಳ್ಳಿಗಳ ಎಲ್ಲಾ ಜನರು ಅದೇ ರಸ್ತೆಯಲ್ಲಿ ಓಡಾಡುತ್ತಾರೆ ಎನ್ನುವುದು ಸರಿ. ನಮ್ಮ ಊರಿಂದ ಅದೇ ರಸ್ತೆಯಲ್ಲಿ ಸ್ವಲ್ಪ ದೂರ ಹೋದರೆ ಅಕ್ಕೂರು ಠಾಣೆ ಇದೆ ಎನ್ನುವುದು ಸರಿ. ಆ ರಸ್ತೆಯಲ್ಲಿ ಸರ್ಕಾರಿ ವಾಹನಗಳು ಮತ್ತು

ಇತರೆ ಖಾಸಗಿ ವಾಹನಗಳು ನಿರಂತರವಾಗಿ ಸಂಚರಿಸುತ್ತವೆ ಎನ್ನುವುದು ಸರಿ.

3. ಸದರಿ ರಸ್ತೆಯಲ್ಲಿ ನಮ್ಮ ಗ್ರಾಮ ಪಂಚಾಯ್ತಿಗೆ ಯಾರು ಲಿಖಿತ ರೂಪದಲ್ಲಿ ಕುಡಿದು ಗಲಾಟೆ ಮಾಡುತ್ತಿದ್ದ ಬಗ್ಗೆ ಯಾರ ಮೇಲೂ ದೂರು ನೀಡಿಲ್ಲ. ಶಾಲೆಯವರಾಗಲೀ, ಸರ್ಕಾರಿ ಆಸ್ಪತ್ರೆಯವರಾಗಲೀ ನಮ್ಮ ಪಂಚಾಯ್ತಿಗೆ ದೂರು ನೀಡಿಲ್ಲ. ಹೊಂಗನೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುವುದರಿಂದ ಸದರಿ ಪಂಚಾಯ್ತಿ ಕಚೇರಿಯಲ್ಲಿ ಯಾವುದೇ ದೂರು ನೀಡಿದ್ದ ಬಗ್ಗೆ ನನಗೆ ಗೊತ್ತಿಲ್ಲ.

4. ಸಾರ್ವಜನಿಕರು ನಮಗೆ ಮೌಖಿಕವಾಗಿ ಕುಡಿದು ಗಲಾಟೆ ಮಾಡುತ್ತಿದ್ದ ಬಗ್ಗೆ ಹೇಳಿದಾಗ ಸ್ಥಳೀಯ ಪೊಲೀಸರಿಗೆ ದೂರು ನೀಡುವಂತೆ ಹೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎನ್ನುವುದು ಸರಿ. ನಾನು 2 ಬಾರಿ ಆ ರೀತಿ ಕುಡಿದು ಗಲಾಟೆ ಮಾಡುತ್ತಿದ್ದುದನ್ನು ನೋಡಿದ್ದೆ. ನಾನು ಆ ವಿಷಯವನ್ನು ಸ್ಥಳೀಯ ಪೊಲೀಸರಿಗೆ ಹೇಳಿ ದೂರು ನೀಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ನಾನು ಹೇಳಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ.

5. ನನ್ನ ಬಳಿ ಆ್ಯಂಡ್ರಾಯ್ಡ್ ಮೊಬೈಲ್ ಇದೆ ಎನ್ನುವುದು ಸರಿ. ಚಾಸಾ.1 ಮತ್ತು ಇತರರು ತೆರೆದ ಸ್ಥಳದಲ್ಲಿ ಕುಡಿದು ಗಲಾಟೆ ಮಾಡುತ್ತಿದ್ದರು. ನಾನು ಮೊಬೈಲ್‌ನಲ್ಲಿ ಆ ದೃಶ್ಯವನ್ನು ಸೆರೆಹಿಡಿಯಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ನನ್ನ ಬಳಿ

ಕೀ ಪ್ಯಾಡ್ ಮೊಬೈಲ್ ಇದ್ದು ಮಾಡಲಾಗಲಿಲ್ಲ ಎಂದು ನುಡಿಯುತ್ತಾರೆ. ನಾನು ಇತ್ತೀಚೆಗೆ ಆ್ಯಂಡ್ರಾಯ್ಡ್ ಮೊಬೈಲ್ ಖರೀದಿಸಿದ್ದೇನೆ.

6. ನಾನು ಚಾಸಾ.1 ಮತ್ತು ಇತರರು ಕುಡಿದು ಗಲಾಟೆ ಮಾಡುತ್ತಿದ್ದಾಗ ನಾನು ಒಬ್ಬನೇ ಇದ್ದೆ. ನಾನು ಒಂದೇ ವಾರದಲ್ಲಿ 2 ಬಾರಿ ಕುಡಿದು ಗಲಾಟೆ ಮಾಡುತ್ತಿದ್ದುದನ್ನು ನೋಡಿದ್ದೆ. ನಾನು ಯಾವುದೇ ದಾರಿಹೋಕರನ್ನು ಆ ದೃಶ್ಯ ಮೊಬೈಲ್‌ನಲ್ಲಿ ಸೆರೆಹಿಡಿದುಕೊಳ್ಳಲು ಹೇಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ನಾನು ಹೆಚ್ಚು ಹೊತ್ತು ಸ್ದಳದಲ್ಲಿ ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

7. ನಮ್ಮ ಊರಿಂದ ಘಟನಾ ಸ್ದಳ ಸುಮಾರು 1 ಕಿಮೀ ಇದೆ. ನಾನು ನನ್ನ ದ್ವಿಚಕ್ರ ವಾಹನದಲ್ಲಿ ಊರಿಗೆ ಹೋಗಿ ಚಾಸಾ.1 ಮತ್ತು ಇತರರು ಕುಡಿದು ಗಲಾಟೆ ಮಾಡುವ ದೃಶ್ಯವನ್ನು ಬೇರೆ ಯಾವುದೇ ಮೊಬೈಲ್ ಅಥವಾ ಕ್ಯಾಮೆರಾದಲ್ಲಿ ಸೆರೆಹಿಡಿಯಲು ಯತ್ನಿಸಲಿಲ್ಲ.

8. ಚಾಸಾ.1 ಮತ್ತು ಇತರರು ಬೇರೆ ಜನಾಂಗದವರನ್ನು ಕರೆದುಕೊಂಡು ಬಂದು ಮತಾಂತರ ಮಾಡುತ್ತಿದ್ದುದನ್ನು ನಾನು ಕಣ್ಣಾರೆ ನೋಡಿಲ್ಲ. ಆ ರೀತಿ ಆಸೆ ಆಮಿಷ ಒಡ್ಡುತ್ತಿದ್ದಾರೆಂದು ನಮ್ಮ ಊರಿನ 2-3 ಮಂದಿ ನನಗೆ ಹೇಳಿದ್ದರು. ಚಾಸಾ.1ರವರು ವಿರೂಪಾಕ್ಷಿಪುರ ಗ್ರಾಮದಲ್ಲಿ ಸುಮಾರು ಇಬ್ಬರನ್ನು ಮತಾಂತರ

ಮಾಡಿಸಿರುತ್ತಾರೆ. ಚಾಸಾ.4 ರವರನ್ನೂ ಸಹ ಚಾಸಾ.1 ರವರು ಮತಾಂತರ ಮಾಡಿಸಿರುತ್ತಾರೆ.

9. ನಮ್ಮ ಊರಿನ 2-3 ಜನರಿಗೆ ಚಾಸಾ.1 ಮತ್ತು ಇತರರು ಮತಾಂತರ ಹೊಂದಲು ಆಸೆ ಆಮಿಷ ಒಡ್ಡಿದ ಬಗ್ಗೆ ದೂರು ನೀಡುವಂತೆ ಹೇಳಿ ಠಾಣೆಯಲ್ಲಿ ದೂರು ಕೊಡಿಸಲಿಲ್ಲ. ಚಾಸಾ.1 ರವರು ಮತಾಂತರ ಮಾಡಿಸಿರುವ ಜನರ ವಿವರಣೆಗಳನ್ನು ಮತ್ತು ದಾಖಲೆಗಳನ್ನು ನೀಡಲು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ.

10. ಚಾಸಾ.1 ಮತ್ತು ಇತರರು ಅವರ ಜಮೀನು ಬಿಟ್ಟು ಬೇರೆ ಯಾವುದೇ ಜಾಗಕ್ಕೆ ಬಂದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ನೀಡಿರುವ ನಕ್ಷೆಯಲ್ಲಿ ಇಗ್ಗಲೂರಿಗೆ ಹೋಗುವ ರಸ್ತೆಯ ತಿರುವಿನ ಎಡಭಾಗದಲ್ಲಿ ಹಿಂದೂಗಳ ರುದ್ರಭೂಮಿ ಇದೆ ಎಂದರೆ ಅದು ಖಾಸಗಿ ಜಮೀನಲ್ಲಿದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಜಾಗದಲ್ಲಿ ಮತ್ತು ರಸ್ತೆಯ ಅಕ್ಕಪಕ್ಕ ದೊಡ್ಡ ದೊಡ್ಡ ಗಿಡಮರಗಳು ಇದೆ ಎಂದರೆ ಸಣ್ಣಪುಟ್ಟ ಪಾರ್ಥೇನಿಯಂ ಮತ್ತು ಮುಳ್ಳು ಗಿಡಗಳು ಇವೆ ಎಂದು ಸಾಕ್ಷಿ ನುಡಿಯುತ್ತಾರೆ.

11. ಭಾವಚಿತ್ರ ಒಂದನ್ನು ಸಾಕ್ಷಿಗೆ ತೋರಿಸಿ ಸದರಿ ಭಾವಚಿತ್ರದಂತೆ ರಸ್ತೆಯಲ್ಲಿ ಮುಂದಕ್ಕೆ ಹೋದರೆ ಬಲಭಾಗಕ್ಕೆ ನಮ್ಮ ಊರು ಮತ್ತು ಎಡಭಾಗದಲ್ಲಿ ಶಾಲೆ ಇರುತ್ತದೆ ಎನ್ನುವುದು ಸರಿ. ಸದರಿ ಭಾವಚಿತ್ರವನ್ನು ನಿ.ಪಿ.13 ಎಂದು ಗುರುತಿಸಲಾಯಿತು.

ನಿ.ಪಿ.13 ರಂತೆ ಎರಡೂ ಬದಿಗಳಲ್ಲಿ ಮರಗಿಡಗಳು ಇವೆ ಎನ್ನುವುದು ಸರಿ. ನಮ್ಮ ಊರಿಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಚಾಸಾ.1 ರವರ ಜಮೀನು ಇದೆ ಎನ್ನುವುದು ಸರಿ. ಸದರಿ ಜಮೀನು ದೂರದಲ್ಲಿದ್ದು ಅಲ್ಲಿಂದ ಶಾಲೆ ಕಾಣುವುದಿಲ್ಲ ಎನ್ನುವುದು ಸರಿ.

12. ಯಾವ ದಿನಾಂಕದಂದು ಚಾಸಾ.1 ಮತ್ತು ಇತರರ ಕೃತ್ಯಗಳಿಂದ ಧಾರ್ಮಿಕ ಕಲಹ ಉಂಟಾಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಆ ರೀತಿ ಯಾವುದೇ ದೂರು ದಾಖಲಾಗಿಲ್ಲ ಎನ್ನುವುದು ಸರಿ. ಗಲಾಟೆ ಆದ ದಿನ ಸುಮಾರು 5-6 ಜನರು ಚಾಸಾ.1 ಮತ್ತು ಇತರರನ್ನು ಕೇಳಲು ಹೋಗಿದ್ದೆವು. ನಾನು, ರೋಹಿತ್, ಗುಂಡಪ್ಪ ಮತ್ತು ಇತರರು ಹೋಗಿದ್ದೆವು. ಚಾಸಾ.1 ಮತ್ತು ಇತರರು ಸಮಾರು 10 ರಿಂದ 15 ಜನ ಇದ್ದರು. ಆಗಲೂ ನಾವು ಯಾರೂ ದೃಶ್ಯವನ್ನು ನಮ್ಮ ಮೊಬೈಲ್‌ಗಳಲ್ಲಿ ಸೆರೆ ಹಿಡಿಯಲಿಲ್ಲ.

13. ಚಾಸಾ.1 ಮತ್ತು ಇತರರು ತಮ್ಮ ಜಮೀನಿಗೆ ಕಲ್ಲು ಕಂಬಗಳನ್ನು ಹಾಕುತ್ತಿದ್ದರು ಎನ್ನುವುದು ಸರಿಯಲ್ಲ. ಆ ಕಾರಣಕ್ಕೆ ನಾವು ಆ ದೃಶ್ಯವನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಲಿಲ್ಲ ಎನ್ನುವುದು ಸರಿಯಲ್ಲ. ಚಾಸಾ.1 ಮತ್ತು ಇತರರು ನಾವು ಚರ್ಚ್ ಕಟ್ಟುತ್ತೇವೆ, ಏನು ಬೇಕಾದರೂ ಮಾಡುತ್ತೇವೆ ಎಂದು ಹೇಳಲಿಲ್ಲವಾದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾವುಗಳೇ ಚಾಸಾ.1 ಮತ್ತು ಇತರರಿಗೆ ಹೊಡೆದು

ಸ್ಥಳದಲ್ಲಿಯೇ ಇದ್ದ ಹೆಣ್ಣು ಮಕ್ಕಳಿಗೆ ಕೈ ಹಿಡಿದು ಎಳೆದಾಡಿ ಅವಮಾನ ಮಾಡಿರುತ್ತೇವೆ ಎನ್ನುವುದು ಸರಿಯಲ್ಲ.

14. ಸದರಿ ಸ್ಥಳದಿಂದ ಪೊಲೀಸ್ ಠಾಣೆಗೆ 5 ನಿಮಿಷದಲ್ಲಿ ಹೋಗಬಹುದು. ನಾನು ಚಾಸಾ.1 ಮತ್ತು ಇತರರು ನಮಗೆ ಧಮ್ಕಿ ಹಾಕಿದ ಕೂಡಲೇ ಠಾಣೆಗೆ ಹೋಗಿ ದೂರು ನೀಡಲು ಯಾವುದೇ ತೊಂದರೆ ಇರಲಿಲ್ಲ ಎನ್ನುವುದು ಸರಿ.

15. ನಾವು ಎಲ್ಲರೂ ಚಾಸಾ.1 ಮತ್ತು ಇತರರು ಮನೆಗೆ ಹೋದ ನಂತರ ಅವರ ಜಮೀನಿನ ಬಳಿ ಹೋಗಿ ಕಲ್ಲು ಕಂಬಗಳನ್ನು ಕಿತ್ತು ಹಾಕಿ ಮುರಿದು ಹಾಕಿರುತ್ತೇವೆ ಎನ್ನುವುದು ಸರಿಯಲ್ಲ. ಚಾಸಾ.1 ಮತ್ತು ಇತರರು ದಲಿತರಿದ್ದು ಕಡಿಮೆ ಜನ ಇರುತ್ತಾರೆಂಬ ಕಾರಣಕ್ಕೆ ಜಮೀನು ಲಪಟಾಯಿಸುವ ಉದ್ದೇಶದಿಂದ ಚಾಸಾ.1 ಮತ್ತು ಇತರರ ಮೇಲೆ ಗಲಾಟೆ ಮಾಡಿ ಹೆದರಿಸಿರುತ್ತೇವೆ ಎನ್ನುವುದು ಸರಿಯಲ್ಲ. ಈಗಲೂ ಚಾಸಾ.1 ರವರು ಜಮೀನಿನ ಬಳಿ ಬರುವುದಿಲ್ಲ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.